# ಕರ್ನಾಟಕ ವಿಧಾನ ಪರಿಷತ್

## ನಿಯಮ-72

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ ನಿಯಮ-72 ರಡಿಯಲ್ಲಿ ನೀಡಿರುವ ಸೂಚನಾ ಪತ್ರ:**

**ವಿಷಯ:** ಕರ್ನಾಟಕ ರಾಜ್ಯದಲ್ಲಿ 1020 ಮಂದಿ 'ಪಟೇಲರು' ಗಳಿದ್ದು ಸದರಿ ಪಟೇಲರುಗಳಿಗೆ ಮಾಸಿಕ ರೂ.3,000/- ಅನುಕಂಪದ ಭತ್ಯೆ ನೀಡಲಾಗುತ್ತಿದ್ದು, ವಯೋವೃದ್ಧರಾಗಿದ್ದು, ಈ ಪಟೇಲರುಗಳಿಗೆ ಕನಿಷ್ಠ ರೂ.5,000/- ನ್ನು ಮಾಸಿಕ ಅನುಕಂಪದ ಭತ್ಯೆ ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

ಪ್ರಸ್ತುತ ರಾಜ್ಯದಲ್ಲಿ ದಿನಾಂಕ:29.01.2020ರ ಅಂತ್ಯಕ್ಕೆ ಒಟ್ಟು 1289 ಜನ ಮಾಜಿ ಪಟೇಲರುಗಳಿದ್ದು, ಸದರಿ ಪಟೇಲರುಗಳಿಗೆ 1984ರಲ್ಲಿ ನೀಡುತ್ತಿದ್ದ ರೂ. 100ಗಳ (ಅಡಹಾಕ್) ಅನುಕಂಪ ಭತ್ಯೆಯನ್ನು 1994ರಲ್ಲಿ ರೂ.500, 2009ರಲ್ಲಿ ರೂ.1,000, 2012ರಲ್ಲಿ ರೂ.1,250, 2013ರಲ್ಲಿ ರೂ.1,450, 2014ರಲ್ಲಿ ರೂ.2,000 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಕಂಇ 16 ಎಂವಿಎಸ್ 2015, ದಿನಾಂಕ:09.08.2017ರನ್ವಯ ರೂ.2,000/- ದಿಂದ ರೂ.3,000/- ಗಳಿಗೆ ಅನುಕಂಪ ಭತ್ಯೆ ಹೆಚ್ಚಿಸಿ, ಪ್ರಸ್ತುತ ಮಾಹೆಯಾನ ತಲಾ ರೂ.3,000/- ಗಳಂತೆ ಅನುಕಂಪ ಭತ್ಯೆಯನ್ನು ನೀಡಲಾಗುತ್ತಿದ್ದು, ಆರ್ಥಿಕ ವರ್ಷವೊಂದಕ್ಕೆ 1289 ಜನ ಮಾಜಿ ಪಟೇಲರುಗಳಿಗೆ ಮಾಸಿಕ ರೂ. 3,000/-ದಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಒಟ್ಟಾರೆ ಈ ಕಾರ್ಯಕ್ರಮಕ್ಕೆ ವಾರ್ಷಿಕ ಅಂದಾಜು ರೂ.464.04ಲಕ್ಷ ವೆಚ್ಚವಾಗುತ್ತಿದೆ.

ಕರ್ನಾಟಕ ರಾಜ್ಯ ಪಟೇಲರ ಸಂಘವು ಮಾಜಿ ಪಟೇಲರುಗಳಿಗೆ ಹಾಲಿ ನೀಡಲಾಗುತ್ತಿರುವ ಮಾಸಿಕ ಭತ್ಯೆಯನ್ನು ರೂ.3,000/- ಗಳಿಂದ ರೂ.4,000/- ಗಳಿಗೆ ಅನುಕಂಪ ಭತ್ಯೆ ಹೆಚ್ಚಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ, ದಿನಾಂಕ: 09.08.2017ರಲ್ಲಿ ಈಗಾಗಲೇ ರೂ. 2,000/- ರಿಂದ ರೂ. 3,000/-ಕ್ಕೆ ಹೆಚ್ಚಿಸಲಾಗಿರುವುದರಿಂದ, ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದೆ.

ಆದುದರಿಂದ ಅನುಕಂಪ ಭತ್ಯೆಯನ್ನು ರೂ.3,000/-ಗಳಿಂದ ರೂ.5,000/- ಗಳಿಗೆ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಗಣನೆಗೆ ಇರುವುದಿಲ್ಲ. ತದನಂತರ, ಮತ್ತೊಮ್ಮೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಪರಿಶೀಲಿಸಲಾಗುತ್ತಿದೆ.

**ಕಂಇ 06 ಎಂವಿಎಸ್ 2020**

(ಆರ್.ಅಶೋಕ)
ಕಂದಾಯ ಸಚಿವರು